**ಕರ್ನಾಟಕ ಸರ್ಕಾರ**

**ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು,**

**ಬೆಂಗಳೂರು**

**ನೋವೆಲ್ ಕರೋನಾ ವೈರಸ್ (ಕೋವಿಡ್–19)**

**ಪತ್ರಿಕಾ ಪ್ರಕಟಣೆ**

**ದಿನಾಂಕ: 30.03.2020** **ಸಮಯ : ಮಧ್ಯಾಹ್ನ 2 ಗಂಟೆ**

ಇಲ್ಲಿಯವರೆಗೆ ಭಾರತವೂ ಸೇರಿದಂತೆ 203 ದೇಶ/ಪ್ರದೇಶಗಳನ್ನು ಬಾಧಿಸಿರುವ ಇತ್ತೀಚಿನ ನೋವೆಲ್ ಕರೋನಾ ವೈರಸ್‌ನ್ನು (ಕೋವಿಡ್–19) ಅಂತರಾಷ್ಟ್ರೀಯ ಕಾಳಜಿಯ ಸಾರ್ವಜನಿಕ ಆರೋಗ್ಯ ತುರ್ತು ಪರಿಸ್ಥಿತಿ (ಪಿಹೆಚ್‌ಇಸಿ) ಎಂದು ವಿಶ್ವ ಆರೋಗ್ಯ ಸಂಸ್ಥೆಯು ಘೋಷಿಸಿದೆ. 11 ಮಾರ್ಚ್ 2020ರಂದು ವಿಶ್ವ ಆರೋಗ್ಯ ಸಂಸ್ಥೆಯು ಕೋವಿಡ್–19ನ್ನು ಸರ್ವವ್ಯಾಪಿ ರೋಗ ಎಂದು ಘೋಷಿಸಿದೆ.

ಈ ಹಿನ್ನೆಲೆಯಲ್ಲಿ, ಕರ್ನಾಟಕ ರಾಜ್ಯವು ರೋಗ ತಡೆಗಟ್ಟುವ ಕ್ರಮಗಳನ್ನು ಎಲ್ಲ ರೀತಿಯ ಸರ್ವೇಕ್ಷಣೆಯನ್ನು ಮತ್ತು ಸಮೂಹ ನಿಯಂತ್ರಣ ಕಾರ್ಯತಂತ್ರಗಳನ್ನು ಬಲಪಡಿಸಿದೆ. ಅಂತರಾಷ್ಟ್ರೀಯ ಪ್ರಯಾಣಿಕರ ಸಾರ್ವತ್ರಿಕ ತಪಾಸಣೆ ಮುಂದುವರೆದಿದೆ.

**“ಕರ್ನಾಟಕ ರಾಜ್ಯದಲ್ಲಿ ಇಲ್ಲಿಯವರೆಗೆ ಒಟ್ಟು 88 ಕೋವಿಡ್–19 ಖಚಿತಪಟ್ಟ ಪ್ರಕರಣಗಳು, ಅವುಗಳಲ್ಲಿ 3 ಮರಣ ಮತ್ತು 6 ಜನ ಬಿಡುಗಡೆ ಹೊಂದಿರುತ್ತಾರೆ.”**

- 78 ಕೋವಿಡ್–19 ಪೀಡಿತ ರೋಗಿಗಳು ಗೊತ್ತುಪಡಿಸಿದ ಆಸ್ಪತ್ರೆಗಳ ಪ್ರತ್ಯೇಕ ವಾರ್ಡ್‌ನಲ್ಲಿ ಚಿಕಿತ್ಸೆ ಪಡೆಯುತ್ತಿದ್ದು, ಆರೋಗ್ಯವು ಸ್ಥಿರವಾಗಿರುತ್ತದೆ ಹಾಗೂ ಒಬ್ಬರು (ಪಿ47) ವೆನ್‌ಟಿಲೇಟರ್‌ನಲ್ಲಿ ಇಡಲಾಗಿರುತ್ತದೆ.
- ಕರ್ನಾಟಕ ರಾಜ್ಯದಲ್ಲಿ ನೂತನವಾಗಿ 5 ಹೊಸ ಕೋವಿಡ್ –19 ಪೀಡಿತರ ವಿವರ ಕೆಳಕಂಡಂತೆ ಇರುತ್ತದೆ.
  - P84: 13 ವರ್ಷದ ಹುಡುಗ, ತುಮಕೂರು ಜಿಲ್ಲೆಯ ನಿವಾಸಿಯಾಗಿದ್ದು (ಪಿ60ರ ಮಗ). ಈ ವ್ಯಕ್ತಿಯನ್ನು ತುಮಕೂರು ನಿಗದಿತ ಆಸ್ಪತ್ರೆಯಲ್ಲಿ ಪ್ರತ್ಯೇಕಗೊಳಿಸಲಾಗಿರುತ್ತದೆ.
  - P85: 32 ವರ್ಷದ ಪುರಷ, ನಂಜನಗೂಡು, ಮೈಸೂರು ಜಿಲ್ಲೆಯ ನಿವಾಸಿಯಾಗಿರುತ್ತಾರೆ. ಪ್ರಾಥಮಿಕ ತನಿಖೆಗಳ ಪ್ರಕಾರ ಈ ವ್ಯಕ್ತಿಯು ಪಿ.52 ಕೆಲಸ ನಿರ್ವಹಿಸುತ್ತಿದ್ದ ಔಷಧಿ ತಯಾರಿಕೆ ಕಂಪನಿಯಲ್ಲೇ ಕರ್ತವ್ಯ ನಿರ್ವಹಿಸುತ್ತಿರುತ್ತಾರೆ. ಈ ವ್ಯಕ್ತಿಯನ್ನು ಮೈಸೂರು ನಿಗದಿತ ಆಸ್ಪತ್ರೆಯಲ್ಲಿ ಪ್ರತ್ಯೇಕಗೊಳಿಸಲಾಗಿರುತ್ತದೆ.
  - P86: 34 ವರ್ಷದ ಪುರಷ, ನಂಜನಗೂಡು, ಮೈಸೂರು ಜಿಲ್ಲೆಯ ನಿವಾಸಿಯಾಗಿರುತ್ತಾರೆ. ಪ್ರಾಥಮಿಕ ತನಿಖೆಗಳ ಪ್ರಕಾರ ಈ ವ್ಯಕ್ತಿಯು ಪಿ.52 ಕೆಲಸ ನಿರ್ವಹಿಸುತ್ತಿದ್ದ ಔಷಧಿ ತಯಾರಿಕೆ ಕಂಪನಿಯಲ್ಲೇ ಕರ್ತವ್ಯ ನಿರ್ವಹಿಸುತ್ತಿರುತ್ತಾರೆ. ಈ ವ್ಯಕ್ತಿಯನ್ನು ಮೈಸೂರು ನಿಗದಿತ ಆಸ್ಪತ್ರೆಯಲ್ಲಿ ಪ್ರತ್ಯೇಕಗೊಳಿಸಲಾಗಿರುತ್ತದೆ.
  - P87: 21 ವರ್ಷದ ಪುರಷ, ನಂಜನಗೂಡು, ಮೈಸೂರು ಜಿಲ್ಲೆಯ ನಿವಾಸಿಯಾಗಿರುತ್ತಾರೆ. ಪ್ರಾಥಮಿಕ ತನಿಖೆಗಳ ಪ್ರಕಾರ ಈ ವ್ಯಕ್ತಿಯು ಪಿ.52 ಕೆಲಸ ನಿರ್ವಹಿಸುತ್ತಿದ್ದ ಔಷಧಿ ತಯಾರಿಕೆ ಕಂಪನಿಯಲ್ಲೇ ಕರ್ತವ್ಯ ನಿರ್ವಹಿಸುತ್ತಿರುತ್ತಾರೆ. ಈ ವ್ಯಕ್ತಿಯನ್ನು ಮೈಸೂರು ನಿಗದಿತ ಆಸ್ಪತ್ರೆಯಲ್ಲಿ ಪ್ರತ್ಯೇಕಗೊಳಿಸಲಾಗಿರುತ್ತದೆ.
  - P88: 24 ವರ್ಷದ ಪುರಷ, ನಂಜನಗೂಡು, ಮೈಸೂರು ಜಿಲ್ಲೆಯ ನಿವಾಸಿಯಾಗಿರುತ್ತಾರೆ. ಪ್ರಾಥಮಿಕ ತನಿಖೆಗಳ ಪ್ರಕಾರ ಈ ವ್ಯಕ್ತಿಯು ಪಿ.52 ಕೆಲಸ ನಿರ್ವಹಿಸುತ್ತಿದ್ದ ಔಷಧಿ ತಯಾರಿಕೆ ಕಂಪನಿಯಲ್ಲೇ ಕರ್ತವ್ಯ ನಿರ್ವಹಿಸುತ್ತಿರುತ್ತಾರೆ. ಈ ವ್ಯಕ್ತಿಯನ್ನು ಮೈಸೂರು ನಿಗದಿತ ಆಸ್ಪತ್ರೆಯಲ್ಲಿ ಪ್ರತ್ಯೇಕಗೊಳಿಸಲಾಗಿರುತ್ತದೆ.

| Karnataka District wise update | | | | |
|---|---|---|---|---|
| **Sl. No** | **District** | **Total confirmed cases** | **Cured / discharged** | **Death** |
| 1 | Bengaluru | 41 | 6* | 1 |
| 2 | Mysore | 12 | 0 | 0 |
| 3 | Chikkaballapura | 8 | 0 | 0 |
| 4 | Dakshina kannada | 7 | 0 | 0 |
| 5 | Uttarakannada | 7 | 0 | 0 |
| 6 | Kalburgi | 3 | 0 | 1 |
| 7 | Davangere | 3 | 0 | 0 |
| 8 | Udupi | 3 | 0 | 0 |
| 9 | Tumkur | 2 | 0 | 1 |
| 10 | Kodagu | 1 | 0 | 0 |
| 11 | Dharwad | 1 | 0 | 0 |
| Total | | 88 | 5 | 3 |

* P1, P2, P3, P4, P5 ಮತ್ತು P11 ಪ್ರಕರಣಗಳು ಗುಣಮುಖ ಹೊಂದಿ ಆಸ್ಪತ್ರೆಯಿಂದ ಬಿಡುಗಡೆಗೊಳಿಸಲಾಗಿರುತ್ತದೆ ಮತ್ತು P6, P53 & P60 ಮರಣ ಹೊಂದಿರುತ್ತಾರೆ.

ಈ ಎಲ್ಲಾ ಕೋವಿಡ್–19 ಸೋಂಕಿತರ ಸಂಪರ್ಕದಲ್ಲಿದವರ ಪತ್ತೆ ಮಾಡಲು ಪ್ರಾರಂಭಿಸಲಾಗಿದೆ.

**ಸೂಚನೆ:** ಕರ್ನಾಟಕದಲ್ಲಿ ಒಟ್ಟು ಪತ್ತೆ ಮಾಡಲಾಗಿರುವ 88 ಪ್ರಕರಣಗಳಲ್ಲಿ **6** ಪ್ರಕರಣಗಳು ಕೇರಳದವರಾಗಿದ್ದು, ಅವರು ಕರ್ನಾಟಕದ ವಿಮಾನ ನಿಲ್ದಾಣಕ್ಕೆ ಆಗಮಿಸಿ, ಅವರು ಕರ್ನಾಟಕದಲ್ಲೇ ಚಿಕಿತ್ಸೆ ಪಡೆಯುತ್ತಿದ್ದಾರೆ.

ಕರ್ನಾಟಕದಲ್ಲಿ ಈ ದಿನದವರೆಗೆ, **1,28,274** ಹೊರದೇಶದಿಂದ ಪ್ರಯಾಣಿಕರನ್ನು ತಪಾಸಣೆ ಮಾಡಲಾಗಿದೆ. ವಿಮಾನ ನಿಲ್ದಾಣವಾರು ವರದಿಗಳು ಈ ಕೆಳಕಂಡತೆ ಇವೆ.

1) ಕೆಂಪೇಗೌಡ ಅಂತರಾಷ್ಟ್ರೀಯ. ವಿಮಾನ ನಿಲ್ದಾಣ, ಬೆಂಗಳೂರು– 89,963.
   **ದಿನಾಂಕ 17.03.2020 ರಿಂದ 23.03.2020 ರವರೆಗೆ ಬಂದಿಳಿದ ಮತ್ತು ತಪಾಸಣೆಗೆ ಒಳಪಟ್ಟ ಒಟ್ಟು ಅಂತರ ರಾಷ್ಟ್ರೀಯ ಪ್ರಯಾಣಿಕರ ಸಂಖ್ಯೆ 10,773 .**

2) ಮಂಗಳೂರು ಅಂತರ್ರಾಷ್ಟ್ರೀಯ ವಿಮಾನ ನಿಲ್ದಾಣ– 31,917 ಪ್ರಯಾಣಿಕರು ಮಾಡಲಾಗಿದೆ.

3) 6,394 ಪ್ರಯಾಣಿಕರನ್ನು ಮಂಗಳೂರು ಮತ್ತು ಕಾರವಾರ ಕಡಲ ಬಂದರುಗಳಲ್ಲಿ ತಪಾಸಣೆ ಮಾಡಲಾಗಿದೆ. ದಿನಾಂಕ 29–03–2020 ರಂದು 48 ಜನರನ್ನು ತಪಾಸಣೆ ಮಾಡಲಾಗಿದೆ.

| ಸಂಗ್ರಹ ವರದಿ | | | |
|---|---|---|---|
| **ಚಟುವಟಿಕೆ** | | **ಈ ದಿನ** | **ಸಂಚಿತ** |
| ಅ | ಅವಲೋಕನೆಗಾಗಿ ಪಟ್ಟಿ ಮಾಡಲ್ಪಟ್ಟವರು | 456 | 42929 |
| ಆ | 14 ದಿನಗಳ observation ಪೂರ್ಣಗೊಂಡಿರುವವರ ಸಂಖ್ಯೆ | 2585 | 33033 |
| ಇ | 28 ದಿನಗಳ observation ಪೂರ್ಣಗೊಂಡಿರುವವರ ಸಂಖ್ಯೆ | 133 | 2502 |
| ಈ | ವ್ಯಕ್ತಿಗಳಿಗೆ ಸ್ವ್ಯಾಬ್ ಮಾಡಿರುವ ವ್ಯಕ್ತಿಗಳ ಸಂಖ್ಯೆ | 790 | 23152 |
| ಉ | ಆಸ್ಪತ್ರೆಗಳಲ್ಲಿ ಪ್ರತ್ಯೇಕವಾಗಿ ಇರಿಸಲ್ಪಟ್ಟವರು | 40 | 193 |
| ಊ | ಪರೀಕ್ಷೆ ಮಾಡಲು ಸಂಗ್ರಹಿಸಲಾದ ಒಟ್ಟು ಮಾದರಿಗಳು | 172 | 3243 |
| ಋ | ನೆಗೆಟಿವ್ ಎಂದು ವರದಿಯಾದ ಒಟ್ಟು ಫಲಿತಾಂಶಗಳು | 207 | 3025 |
| ಎ | ಖಚಿತ ಪಟ್ಟ ಫಲಿತಾಂಶಗಳು | 5 | 88 |

## ನಿಗದಿತ ಆಸ್ಪತ್ರೆಗಳಲ್ಲಿ ಪ್ರತ್ಯೇಕವಾಗಿರಿಸಲ್ಪಟ್ಟವರ ವಿವರ

| ಕ್ರ. ಸಂ. | ಜಿಲ್ಲೆಯ ಹೆಸರು | ಇಂದಿನ ಹೊಸ ಒಳರೋಗಿಗಳು | ಇಂದು ಬಿಡುಗಡೆ ಮಾಡಲಾದವರು | ಒಟ್ಟು ಪತ್ಯೇಕವಾಗಿರಿಸಿದವರು |
|---|---|---|---|---|
| 1 | ಬೆಂಗಳೂರು (RGICD) | 0 | 0 | 5 |
| 2 | ಬೆಂಗಳೂರು (ಗುರುತಿಸಲಾದ ಆಸ್ಪತ್ರೆಗಳು) | 0 | 4 | 20 |
| 3 | ದಕ್ಷಿಣ ಕನ್ನಡ | 4 | 2 | 33 |
| 4 | ಬಳ್ಳಾರಿ | 4 | 0 | 10 |
| 5 | ಕಲಬುರಗಿ | 6 | 0 | 33 |
| 6 | ಕೊಡಗು | 0 | 0 | 1 |
| 7 | ಉಡುಪಿ | 2 | 6 | 23 |
| 8 | ಬೀದರ್ | 0 | 0 | 10 |
| 9 | ಗದಗ | 6 | 0 | 6 |
| 10 | ಉತ್ತರ ಕನ್ನಡ | 1 | 8 | 10 |
| 11 | ಧಾರವಾಡ | 0 | 0 | 4 |
| 12 | ಹಾಸನ | 0 | 0 | 3 |
| 13 | ಚಿತ್ರದುರ್ಗ | 0 | 9 | 1 |
| 14 | ದಾವಣಗೆರೆ | 1 | 0 | 4 |
| 15 | ಮೈಸೂರು | 0 | 0 | 12 |
| 16 | ಶಿವಮೊಗ್ಗ | 2 | 1 | 4 |
| 17 | ತುಮಕೂರು | 11 | 0 | 34 |
| 18 | ಚಿಕ್ಕಬಳ್ಳಾಪುರ | 2 | 0 | 8 |
| 19 | ವಿಜಯಪುರ | 0 | 1 | 3 |
| 20 | ಯಾದಗಿರಿ | 1 | 0 | 1 |
| 21 | ಬಾಗಲಕೋಟೆ | 0 | 0 | 1 |
| 22 | ಚಿಕ್ಕಮಗಳೂರು | 0 | 1 | 0 |
| ಒಟ್ಟು | | **49** | **51** | **226** |

**ಇಂದಿನ ವಿಷಯಗಳು:**

1) ಅಪರ ಮುಖ್ಯ ಕಾರ್ಯದರ್ಶಿಗಳು, ಆ.ಕು.ಕ. ಇಲಾಖೆ, ಕರ್ನಾಟಕ ಸರ್ಕಾರ ರವರು ಜಿಲ್ಲಾ ಆಡಳಿತಾಧಿಕಾರಿಗಳೊಂದಿಗೆ ದಿನಾಂಕ 30.03.2020 ರಂದು ಕೋವಿಡ್–19 ಸನ್ನದ್ದತೆ ಮತ್ತು ನಿಯಂತ್ರಣ ಕಾರ್ಯಗಳನ್ನು ವೀಡಿಯೋ ಕಾನ್ಫರೆನ್ಸ್ ಮುಖಾಂತರ ಮೌಲ್ಯಮಾಪನ ಮಾಡಿದರು.

1) ಕರ್ನಾಟಕ ಸರ್ಕಾರ ಸಚಿವಾಲಯವು ಕೋವಿಡ್–19 ರ ಕಾರಣದಿಂದ ವಿದ್ಯಾರ್ಥಿ ನಿಲಯಗಳಲ್ಲಿ, ಉದ್ಯೋಗಸ್ಥ ಮಹಿಳೆಯರ ವಸತಿ ಗೃಹಗಳಲ್ಲಿ ಹಾಗೂ ಪೇಯಿಂಗ್ ಗೆಸ್ಟ್‌ಹೌಸ್‌ನಲ್ಲಿ ತಂಗಿರುವಂತಹವರನ್ನು ತೆರವುಗೊಳಿಸದಂತೆ ನೋಡಿಕೊಳ್ಳಲು ಹಾಗೂ ಸದರಿಯವರಿಗೆ ಹೆಚ್ಚಿನ ಶುಚಿತ್ವದೊಂದಿಗೆ ಊಟವನ್ನು ನೀಡಲು ರಾಜ್ಯದ ಎಲ್ಲಾ ಜಿಲ್ಲಾಡಳಿತವು ಅಗತ್ಯ ಕ್ರಮವನ್ನು ತೆಗೆದುಕೊಳ್ಳುವಂತೆ ಸುತ್ತೋಲೆಯನ್ನು ಹೊರಡಿಸಿರುತ್ತದೆ.

2) ಕೋವಿಡ್–19 ಪ್ರಕರಣಗಳು ಉಲ್ಬಣಿಸುತ್ತಿರುವ ಕಾರಣ ಶಂಕಿತ ಕೋವಿಡ್–19 ಹಾಗೂ ದೃಢಪಟ್ಟ ಪ್ರಕರಣಗಳ ಚಿಕಿತ್ಸೆಗಾಗಿ ಜಿಲ್ಲಾ ಆಸ್ಪತ್ರೆಗಳನ್ನು ನಿಗಧಿಪಡಿಸುವ ನಿಟ್ಟಿನಲ್ಲಿ ಈಗಾಗಲೆ AB-ArK ಯೋಜನೆಯಡಿಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ರೋಗಿಗಳನ್ನು ಪರ್ಯಾಯ ಆಯ್ಕೆ ಮಾಡಿರುವ ಖಾಸಗಿ ಆಸ್ಪತ್ರೆಗಳು ಹಾಗೂ ಈಗಾಗಲೇ ನೊಂದಾಯಿತ ಖಾಸಗಿ ಆಸ್ಪತ್ರೆಗಳಿಗೆ ***ಕೋವಿಡ್–19 ತುರ್ತುಪರಿಸ್ಥಿತಿ ಇರುವವರೆಗೆ*** ವರ್ಗಾವಣೆ ಮಾಡಲು ಕರ್ನಾಟಕ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ರವರು ಸರ್ಕಾರಿ ಆದೇಶ ಸಂಖ್ಯೆ. ಆಕುಕ 68 ಸಿಜಿಇ 2020 ದಿನಾಂಕ 29.03.2020 ಅನ್ನು ಹೊರಡಿಸಿರುತ್ತಾರೆ.

3) **Home Quarantine enforcement squad** ತಂಡದವರು, ಸಾರ್ವಜನಿಕರಿಂದ ಪಡೆದ ದೂರುಗಳ ಮೇರೆಗೆ ನಿನ್ನೆ 22 ವ್ಯಕ್ತಿಗಳನ್ನು ಸಂಸ್ಥೆಗಳಲ್ಲಿ ಕ್ವಾರಂಟೈನ್ ಮಾಡಲಾಗಿ, ಇದೂವರೆಗೂ ಒಟ್ಟು 144 ವ್ಯಕ್ತಿಗಳನ್ನು ಮನೆ ಕ್ವಾರಂಟೈನ್‌ನಿಂದ ನಿಗಧಿತ ಸಂಸ್ಥೆಗಳಲ್ಲಿ ಕ್ವಾರನ್‌ಟೈನ್‌ಗೆ ವರ್ಗಾವಣೆ ಮಾಡಿರುತ್ತಾರೆ.

4) ನಿಯೋಜಿತ ಆಸ್ಪತ್ರೆಗಳಲ್ಲಿ ದಾಖಲಾಗಿರುವ ಪಾಸಿಟಿವ್ ಪ್ರಕರಣಗಳು ಮತ್ತು ಶಂಕಿತರು ಮತ್ತು ಸಮೂಹ ಕ್ವಾರಂಟೀನ್ ಕೇಂದ್ರಗಳಲ್ಲಿ ಅಥವಾ ಮನೆಗಳಲ್ಲಿ ಕ್ವಾರಂಟೀನ್ ವ್ಯವಸ್ಥೆಯಲ್ಲಿ ಇರುವವರು ಕನಿಷ್ಠ 14 ದಿನಗಳ ಕಾಲ ಅಥವಾ ಪಾಸಿಟಿವ್ ಪ್ರಕರಣದ ಸರಣಿ ಮಾದರಿಗಳು ನೆಗೆಟಿವ್ ಎಂದು ಸಾಬೀತಾಗುವ ತನಕ ಅಥವಾ ಅವರಿಗೆ ಚಿಕಿತ್ಸೆ ನೀಡುತ್ತಿರುವ ವೈದ್ಯರ ಸಲಹೆ ಸಿಗುವ ತನಕ ಸಂಬಂಧಪಟ್ಟ ವ್ಯಕ್ತಿಗಳನ್ನು ಬಿಡುಗಡೆ ಮಾಡುವುದಿಲ್ಲ. ಪ್ರತ್ಯೇಕ ವ್ಯವಸ್ಥೆಯಲ್ಲಿ ಇಷ್ಟೊಂದು ಸುದೀರ್ಘ ಕಾಲ ಸಂಯಮದಿಂದ ಇರಲು ಮಾನಸಿಕ ಸ್ಥೈರ್ಯದ ಅಗತ್ಯವಿರುತ್ತದೆ. ಈ ಅಗತ್ಯವನ್ನು ಮನಗಂಡು ಇಲಾಖೆಯು ಅಂತಹ ರೋಗಿಗಳಿಗೆ ಮತ್ತು ಸ್ಥೈರ್ಯದ ಅಗತ್ಯವಿರುತ್ತದೆ. ಈ ಅಗತ್ಯವನ್ನು ಮನಗಂಡು ಇಲಾಖೆಯು ಅಂತಹ ರೋಗಿಗಳಿಗೆ ಮತ್ತು ಸಂಪರ್ಕಿತರಿಗೆ **ಮಾನಸಿಕ ಆರೋಗ್ಯದ ಆಪ್ತ ಸಮಾಲೋಚನೆಗೆ** ವ್ಯವಸ್ಥೆ ಮಾಡಿದೆ. **ದಿನಾಂಕ 29.03.2020 ರಂದು 1,029 ಸಂಖ್ಯೆಯ ಕೌನ್ಸಿಲಿಂಗ್** ಮತ್ತು ಒಟ್ಟು 13,687 ಸಂಖ್ಯೆಯ ಕೌನ್ಸೆಲಿಂಗ್ ನಡೆದಿದೆ.

5) ಮಾನ್ಯ ಮುಖ್ಯ ಮಂತ್ರಿಗಳು ಕೋವಿಡ್–19 ನಿಯಂತ್ರಣಕ್ಕೆ ಸ್ವಇಚ್ಛೆಯಿಂದ ಟೆಲಿಮೆಡಿಸನ್ ಮುಖಾಂತರ ಸೇವೆ ಸಲ್ಲಿಸಲು ಬಯಸುವ ವೈದ್ಯರಿಗೆ ದೂರವಾಣಿ ಸಂಖ್ಯೆ 08047192219 ಗೆ ಮಿಸ್ಡ್ ಕಾಲ್ ನೀಡಲು ಅಥವಾ https://forms.gle/TPbU7eZgazdxG9gS9 ನಲ್ಲಿ ಸೈನ್ ಅಪ್ ಮಾಡಿಕೊಂಡು ಸರ್ಕಾರಕ್ಕೆ ಸಹಾಯ ಮಾಡಲು ಮನವಿ ಮಾಡಿಕೊಂಡಿರುತ್ತಾರೆ.

6) ಕರೋನಾ ನಿಗಾವಣೆ / ಮೊಬೈಲ್ ಅಪ್ಲಿಕೇಷನ್‌ನ್ನು www.karnataka.gov.in. ಈ ಮೂಲಕ ಡೌನಲೋಡ್ ಮಾಡಿಕೊಳ್ಳಬಹುದಾಗಿದೆ. ಸದರಿ ಅಪ್ಲಿಕೇಷನ್‌ನಲ್ಲಿ ಕೋವಿಡ್–19 ರೋಗಿಯು ಪ್ರಯೋಗಶಾಲಾ ಫಲಿತಾಂಶಕ್ಕೆ ಮೊದಲು 14 ದಿವಸ ಪ್ರಯಾಣ ಮಾಡಿದ ವಿವಿಧ ಸ್ಥಳ / ಪ್ರದೇಶಗಳ ಮಾಹಿತಿ ಲಭ್ಯವಿರುತ್ತದೆ. ಅದರ ಜೊತೆಗೆ ಫಸ್ಟ್ ರೆಸ್‌ಪಾಂಡರ್ ಹಾಗೂ ಸಹಾಯವಾಣಿಗಳ ಸಂಖ್ಯೆ ಲಭ್ಯವಿರುತ್ತದೆ.

7) ಕೋವಿಡ್–19 ಎಲ್ಲಾ ರೀತಿಯ ಅನುಮಾನಗಳಿಗೆ ಸಹಾಯವಾಣಿ ಸಂಖ್ಯೆ 104 ರನ್ನು ಮತ್ತು ಹೊಸ ಸಂಖ್ಯೆ **9745697456** ರನ್ನು ಸಂಪರ್ಕಿಸಬಹುದಾಗಿದೆ.

104 ಆರೋಗ್ಯ ಸಹಾಯವಾಣಿ (ಶುಲ್ಕರಹಿತ ಕಾಲ್ ಸೆಂಟರ್) ಕೋವಿಡ್–19 ಕುರಿತ ಕರೆಗಳಿಗಾಗಿ 210 ಆಸನಗಳನ್ನು ಮೀಸಲಿರಿಸಿದೆ. ದಿನಾಂಕ 29.03.2020 ರಂದು 25,851 ಕರೆಗಳನ್ನು ಸ್ವೀಕರಿಸಲಾಗಿದೆ ಮತ್ತು 101 ಅಗತ್ಯ ಮಾರ್ಗದರ್ಶನದ ನೀಡುವ ಕರೆಗಳನ್ನು ಸೇರಿ ಒಟ್ಟು 45,538 ಹೊರ ಕರೆಗಳನ್ನು ಮಾಡಲಾಗಿದೆ.

**ಸಾರ್ವಜನಿಕರಿಗೆ ಮನವಿ:** ಕೋವಿಡ್–19 ಪೀಡಿತ ದೇಶಗಳಿಂದ ಹಿಂತಿರುಗಿರುವ ಅಥವಾ ಸೋಂಕಿತ ವ್ಯಕ್ತಿಯ ಸಂಪರ್ಕದಲ್ಲಿರುವ ಯಾರಾದರೂ ಭಾರತಕ್ಕೆ ಹಿಂತಿರುಗಿದ ದಿನದಿಂದ 14 ದಿನಗಳವರೆಗೆ, ರೋಗ ಲಕ್ಷಣಗಳು ಇರಲಿ ಅಥವಾ ಇಲ್ಲದಿರಲಿ ಮನೆಯಲ್ಲಿ ಪ್ರತ್ಯೇಕವಾಗಿರುವುದು ಹಾಗೂ ಹತ್ತಿರದ ಸರ್ಕಾರಿ ಆಸ್ಪತ್ರೆಗೆ ವರದಿ ಮಾಡಿಕೊಳ್ಳುವುದು ಅಥವಾ 104 ಸಹಾಯವಾಣಿಗೆ ಕರೆ ಮಾಡುವುದು. ವೈಯಕ್ತಿಕ ಸ್ವಚ್ಛತೆಯನ್ನು ಕಾಪಾಡಿಕೊಳ್ಳಿ. ಕೆಮ್ಮುವಾಗ ಅಥವಾ ಸೀನುವಾಗ ಕರವಸ್ತ್ರ / ಟಿಶ್ಯೂ ಪೇಪರನ್ನು ಬಳಸಿ, ಕೈ ಸ್ವಚ್ಛಗೊಳಿಸುವ ದ್ರಾವಣ ಅಥವಾ ನೀರು ಮತ್ತು ಸೋಪು ಬಳಸಿ ಆಗಾಗ ಕೈಗಳನ್ನು ತೊಳೆದುಕೊಳ್ಳಿ ಮತ್ತು ಸಾಮಾಜಿಕ ಸಮೂಹ ಗುಂಪು ಸೇರುವಿಕೆಯನ್ನು ಮಾಡಬೇಡಿ.

***ನಿಮಗೆ ಸಹಾಯ ಮಾಡಲು ನಮಗೆ ನೆರವು ನೀಡಿ***
***ನಾವೆಲ್ಲರೂ ಒಟ್ಟಾಗಿ ಕೋವಿಡ್–19 ವಿರುದ್ಧ ಹೋರಾಡೋಣ***
***ಸಹಾಯವಾಣಿ ಸಂಖ್ಯೆ 9745697456, 080–46848600, 080–66692000 & 104***

ಎಲ್ಲ ರೀತಿಯ ಮಾರ್ಗಸೂಚಿಗಳು ಮತ್ತು ಸಲಹೆಗಳು ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಜಾಲತಾಣದಲ್ಲಿ ಲಭ್ಯವಿದೆ: https://karunadu.karnataka.gov.in/hfw/kannada/Pages/covid-19.aspx

***********